
## ಭಾವಕ್ಕೆ ತಕ್ಕ ಅರ್ಥ

‘ಅವರವರ ಭಾವಕ್ಕೆ’ (ಜು. 31, ವಸುಮತಿ ಉಡುಪ) ಕಥೆ ಚೆನ್ನಾಗಿದೆ. ಶೀರ್ಷಿಕೆ ಸೂಕ್ತವಾಗಿದೆ. ಇಲ್ಲಿನ ಎಲ್ಲಾ ವಿಷಯಗಳೂ ಓದುವವರ ನಂಬಿಕೆಗೆ ತಕ್ಕಂತೆ ಅರ್ಥವಾಗುತ್ತವೆ. ಜೀವನದಲ್ಲಿ ನನ್ನ ಅನುಭವದ ಆಧಾರದ ಮೇಲೆ, ನಾನು ಮನೋರಮೆಯನ್ನು ಬೆಂಬಲಿಸುತ್ತೇನೆ. ಅದೇ ರೀತಿ ಬದುಕುತ್ತಿದ್ದೇನೆ ಕೂಡ. ಅವಳ ಮಾತಿನ ತರ್ಕ ನನಗರ್ಥವಾಯ್ತು. ಉಳಿದವರು ಅವರವರ ಭಾವಕ್ಕೆ ಅರ್ಥ ಮಾಡಿಕೊಳ್ಳುತ್ತಾರೆ, ಅಲ್ಲವೇ?



—ಕೆ.ಎ. ಸೌಮ್ಯ, ಮೈಸೂರು

## ವೈಚಾರಿಕ ಹಿನ್ನೆಲೆಯಿರಲಿ

ವ್ಯಕ್ತಿಯೊಬ್ಬನ ಆಸ್ತಿಕ ಮನಸ್ಥಿತಿಯಾಗಲೀ, ನಾಸ್ತಿಕ ಮನಸ್ಥಿತಿಯಾಗಲೀ ವೈಚಾರಿಕ ಹಿನ್ನೆಲೆಯಲ್ಲಿ ರೂಪುಗೊಳ್ಳಬೇಕು. ದೃಢವಾದ ಮನಸ್ಸುಗಳ ನಿರ್ಮಾಣ ಇಂದಿನ ತುರ್ತು ಅಗತ್ಯ. ಅಂತಹ ಮನಸ್ಸುಗಳ ನಿರ್ಮಾಣದ ಜವಾಬ್ದಾರಿ ಹಿರಿಯರದ್ದು. ಇಲ್ಲದಿದ್ದರೆ ಡಿ.ವಿ.ಜಿ.ಯವರು ಹೇಳುವಂತೆ ‘ಸಿಂಬಳದ ನೊಣ’ದಂತಹ ಅಸ್ಥಿರ ಅಭಿಪ್ರಾಯವುಳ್ಳ ಯುವಜನರನ್ನು ಕಾಣುವಂತಾಗಬಹುದು.

—ರಾಘವೇಂದ್ರ ಮಯ್ಯ, ಮದ್ದೂರು

## ನೆನಪಾದವು ಮಾತುಗಳು...

‘ಊರ ಮೇಲೊಂದೂರು...’ (ಜು. 31, ಹೆಚ್.ಆರ್. ಸುಜಾತಾ) ‘ಚೆನ್ನುಡಿ’ ಓದುತ್ತಾ ನಮ್ಮ ಅಜ್ಜಿ ಮಾತನಾಡುತ್ತಿದ್ದ ಹಾಗೂ ನಮ್ಮ ತಾಯಿ ಮಾತನಾಡುವ, ‘ಆ ಕಾಲಕ್ಕೆ ಎಷ್ಟೇ ದುಡ್ಡು ಉಂಡಿದ್ದು ತುಂಡ್ಗಂಬ್ಳಿಗೂ ನ್ಯಾರ’, ‘ಮಕ್ಕಳಿದ್ದ ಮನೆಲಿ ಹಂಚಿದರೆ ಹಲ್ಲು ಬಾಯಿ’, ‘ಯಾರು ಕುಟೆ ಬಂದೆ’, ‘ರವೋಟ್ ಕೊಡು’ ಅನ್ನೋ ಮಾತುಗಳು ನೆನಪಾದವು. ಕಥೆಯನ್ನು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ.

—ಅನ್ನಪೂರ್ಣಮ್ಮ, ಬೆಂಗಳೂರು

## ಉತ್ತರಕ್ಕೆ ಸಲಾಂ

ಜುಲೈ 24ರ ಸಂಚಿಕೆಯ ‘ನೀವು ಕೇಳಿದಿರಿ’ ವಿಭಾಗದಲ್ಲಿ ವೈದ್ಯವಸ್ತ್ರದ ಬಿಳಿ ಒಳಿತಿನತ್ತ, ಶವವಸ್ತ್ರದ ಬಿಳಿ ಕೆಡುಕಿನತ್ತ ರಾಮ್‌ರವರ ಉತ್ತರ ಮನಸ್ಪರ್ಶಿಯಾಗಿದೆ. ಬಿಳಿ ಬಣ್ಣ ಒಂದೇ ಆದರೂ ಅಕ್ಕಿಯಂತೆ ಯಾರ ಬಳಿ ಇರುತ್ತದೆಯೋ ಅದೇ ಭಾವ ಬೆಳೆಯುತ್ತದೆ. ಅಕ್ಕಿ ಬೇಳೆ ಜೊತೆ ಸೇರಿದರೆ ಬಿಸಿಬೇಳೆ ಬಾತ್, ಹೆಸರುಬೇಳೆ/ಬೆಲ್ಲದ ಜೊತೆ ಸೇರಿದರೆ ಪೊಂಗಲ್, ಎಳ್ಳಿನೊಂದಿಗಿದ್ದರೆ ಪಿಂಡಕ್ಕೆ ಯೋಗ್ಯ ಎನ್ನುವಂತೆ ಬಿಳಿ ಬಣ್ಣಕ್ಕೆ ಭಾವನೆಗಳ ಮೇಳೈಕೆ ಮಾಡಿರುವುದು ತುಂಬಾ ಚೆನ್ನಾಗಿದೆ. ಪ್ರಶ್ನೆಗೆ ತಕ್ಕ ಉತ್ತರಕ್ಕೊಂದು ಸಲಾಂ.

—ಧನಲಕ್ಷ್ಮಿ ಪುರುಷೋತ್ತಮರಾವ್, ಕೋಲಾರ

## ಆತ್ಮವಿಶ್ವಾಸ ತುಂಬುವ ಲೇಖನ

‘ಬಿ ಪಾಸಿಟಿವ್; ಕ್ಯಾನ್ಸರ್ ಗೆಲ್ಲಬಹುದು’ (ಜು. 31, ಉಮಾ ಅನಂತ್) ಉತ್ತಮ ಹಾಗೂ ಆತ್ಮವಿಶ್ವಾಸ ಕೊಡುವ ಲೇಖನ. ಲೇಖಕರು ಕ್ಯಾನ್ಸರ್‌ನ್ ತಂಡದ ನೈಜ ಘಟನೆಯ ಉದಾಹರಣೆಯನ್ನು ಕೊಟ್ಟು ನೈತಿಕ ಬೆಂಬಲ ಕೊಟ್ಟಿದ್ದಾರೆ. ಕ್ಯಾನ್ಸರ್ ರೋಗಿಗಳಿಗೆ ಈ ಲೇಖನ ಧೈರ್ಯ ಹಾಗೂ ಕಾಯಿಲೆಯನ್ನು ಚಿಕಿತ್ಸೆ ನೀಡಿ ಗುಣಪಡಿಸುವ ಮಾಹಿತಿ ಕೊಡುತ್ತದೆ.

—ನಾಗರಾಜ ರಾವ್

## ಎಂದಿಗೂ ಅಜರಾಮರ

‘ನಾನೇ ಭಾಗ್ಯವತಿ...’ (ಜು. 31) ಪದ್ಮಶ್ರೀ ಪುರಸ್ಕೃತ ಬಿ. ಸರೋಜಾದೇವಿಯವರಿಗೆ ನುಡಿನಮನದ ಸಂಚಿಕೆ. ಹಲವು ಸಿನಿಮಾಗಳಲ್ಲಿನ ಅಮೋಘ ಅಭಿನಯದಿಂದ ಕನ್ನಡಿಗರ ಮನದಲ್ಲಿ ಎಂದಿಗೂ ಅಜರಾಮರ.

‘ಶ್ರೀ ಕೃಷ್ಣ ರುಕ್ಮಿಣಿ ಸತ್ಯಭಾಮಾ’ ಚಿತ್ರದ ರುಕ್ಮಿಣಿ ಹಾಗೂ ‘ಶ್ರೀನಿವಾಸ ಕಲ್ಯಾಣ’ದ ಮಹಾಲಕ್ಷ್ಮಿಯ ಪಾತ್ರ ನೋಡಿದರೆ ದೇವತೆಯರಾದ ರುಕ್ಮಿಣಿ ಹಾಗೂ ಮಹಾಲಕ್ಷ್ಮಿ ಹೀಗೇ ಇದ್ದರೇನೋ ಎನ್ನುವ ಹಾಗೆ ಇವರ ಅಭಿನಯ, ಸೌಂದರ್ಯ. ಬಬ್ರುವಾಹನ ಸಿನಿಮಾದಲ್ಲಿ ಚಿತ್ರಾಂಗದೆಯಾಗಿ ಗಂಡಿನ ವೇಷ ಧರಿಸಿ ಬೇಟೆಗೆ ಬಂದು ಅರ್ಜುನನ ಬಳಿ ಮಾತನಾಡುವ ಈ ರೀತಿ ಮರೆಯಲಾಗದ್ದು. ಕೊನೆಯವರೆಗೂ ಯಾವುದೇ ವಿವಾದಗಳಿಗೆ ಸಿಲುಕದ ನಟಿ ಭಾರತೀಯ ಚಿತ್ರರಂಗದಲ್ಲೇ ಬಹುಶಃ ಇವರೇ ಇರಬೇಕು.

—ಎಸ್.ವಿ. ಗೋಪಾಲ್ ರಾವ್, ಬೆಂಗಳೂರು

## ಸಮಗ್ರ ಮಾಹಿತಿ

ಭಾರತೀಯ ಚಿತ್ರರಂಗದಲ್ಲಿ ಅಜಾತಶತ್ರು ಎನಿಸಿರುವ, ಎಂದೂ ಮಾಸದ ಸೌಂದರ್ಯದ ಗಣಿ ಸರೋಜಾದೇವಿಯ ಹೊಳಪು, ಜೀವನದ ಸಮಗ್ರ ಮಾಹಿತಿ ಮುದಕೊಟ್ಟಿತು. ರೂಪ, ಅಭಿನಯದ ಜೊತೆಗೆ ಇವರ ಹಮ್ಮು ಬಿಮ್ಮು ಇಲ್ಲದ ಆಂತರಿಕ ಗುಣ ಸಂಪೂರ್ಣ ವ್ಯಕ್ತಿತ್ವಕ್ಕೆ ಮೆರುಗು ಕೊಟ್ಟಿತ್ತು. ಈ ಧ್ರುವತಾರೆಯ ಅನನ್ಯ ಅಭಿನಯದ ಸಿನಿಮಾಗಳನ್ನು ಮತ್ತೊಮ್ಮೆ ಮೆಲುಕು ಹಾಕಿದೆನು.

—ಉಷಾ ಲಕ್ಷ್ಮೀ ಅರವಿಂದ ಹೊಳ್ಳ, ಬೆಂಗಳೂರು




## ಸರೋಜಾ- ಸಂಧಾನ!

ಬೆಳ್ಳಿತೆರೆಯ ‘ಅರಗಿಣಿ’ ತಾರೆ ಸರೋಜಾ
‘ದೇವಿ’ಯ ಕಣ್ಮರೆ, ಅಲ್ಲ, ಅಂತರ್ಧಾನ!
(ಇಂಥ ಸಂದರ್ಭದಲ್ಲಿ ಅನಿವಾರ್ಯ,
ಬದುಕು– ಸಾವುಗಳ ಅನುಸಂಧಾನ)

—ಸಿಪಿಕೆ, ಮೈಸೂರು

## ಆದರ್ಶ ನಟಿ

ಸರೋಜಾದೇವಿಯವರನ್ನು ಬರೀ ಒಬ್ಬ ನಟಿಯೆಂದು ಯಾರೂ ಗ್ರಹಿಸಲಾಗದು. ಅವರ ಶಿಸ್ತು, ಸಭ್ಯತೆ, ಪ್ರಾಮಾಣಿಕತೆ, ಜೀವನ ಪ್ರೀತಿ... ಎಲ್ಲವೂ ನಮ್ಮ ನಾಡಿಗೆ ಬಹುದೊಡ್ಡ ಆದರ್ಶ.

—ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ

## ಜನಮನದಲ್ಲಿ ಚಿರಸ್ಥಾಯಿ

‘ಅಭಿನಯ ಸರಸ್ವತಿ’ ಎಂದೇ ಖ್ಯಾತರಾಗಿದ್ದ, ಹತ್ತು ಹಲವು ಪ್ರಶಸ್ತಿಗಳನ್ನು ತನ್ನ ಮುಡಿಗೇರಿಸಿಕೊಂಡಿದ್ದ, ಶಿಸ್ತಿಗೆ ಇನ್ನೊಂದು ಹೆಸರಾಗಿದ್ದ ಚತುರ್ಭಾಷಾ ನಟಿ ಬಿ. ಸರೋಜಾದೇವಿ ಅವರು ಜನಮನದಲ್ಲಿ ಎಂದೆಂದಿಗೂ ಚಿರಸ್ಥಾಯಿ.

—ಪಿ. ಜಯವಂತ ಪೈ, ಕುಂದಾಪುರ

## ನೆನಪಿನ ನುಡಿಗಳು...

‘ನೆನಪಿನ ಅಂಗಳದಲ್ಲಿ ಅಭಿನಯ ಸರಸ್ವತಿ’, ‘ನಾನೇ ಭಾಗ್ಯವತಿ, ಪುಣ್ಯವತೀ...’ಯಲ್ಲಿ ಸರೋಜಾದೇವಿಯವರ ಬಗ್ಗೆ ಜಯಮಾಲಾ ಅವರ ಒಡನಾಟ ಹಾಗೂ ಮೇರುನಟಿಯರ ಫೋಟೊಗಳು, ಸರೋಜಮ್ಮನವರ ಬಗ್ಗೆ ತಾರಾ ಅನುರಾಧ ಅವರ ಮಾತುಗಳು ಬಹಳ ಚೆನ್ನಾಗಿವೆ.

—ಸೀತಾ ಕೇಶವ ಸಿಡ್ಡಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in